ಕರ್ನಾಟಕ ವಿಧಾನಸಭೆ

56 ಶ್ರೀ ಕೆ.ಜೆ. ಜಾರ್ಜ್

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲಿಂಗರಾಜಪುರ, ಹೆಚ್.ಬಿ.ಆರ್.ಲೇಔಟ್ ಮೊದಲ ಹಂತಗಳಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದಿಲ್ಲ. ಆದರೆ ಅರಣ್ಯ ಇಲಾಖೆಯ ಸುಪರ್ದಿನಲ್ಲಿ ಈ ಕೆಳಕಂಡ ಕೆರೆಗಳಿರುತ್ತವೆ.

(1) ಲಿಂಗರಾಜಪುರ ಕೆರೆ – 5.48 ಹೆ.
(2) ಬ್ಯಾಟಗುಟ್ಟಪಾಳ್ಯ ಕೆರೆ – 1.98 ಹೆ.
(3) ಚನ್ನಸಂದ್ರ ಕೆರೆ – 7.48 ಹೆ.

ಆ) ಹಾಗಿದ್ದಲ್ಲಿ, ಜಮೀನಿನ ವಿವರ ನೀಡುವುದು.

ಅನ್ವಯಿಸುವುದಿಲ್ಲ.

ಇ) ಈ ಜಮೀನನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ನೀಡಲು ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಅರಣ್ಯ ಇಲಾಖೆಯ ಜಮೀನಿಲ್ಲದಿರುವುದರಿಂದ ಅಭಿವೃದ್ಧಿ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಲಿಂಗರಾಜಪುರ ಕೆರೆ ಟ್ಯಾಂಕ್ ಬೆಡ್‌ನಲ್ಲಿ 2009–10ನೇ ಸಾಲಿನ ಮಳೆಗಾಲದಲ್ಲಿ 2000 ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಬೇತಿ ಕೇಂದ್ರಗಳ ವಿವರ

57 ಶ್ರೀ ಜಾರ್ಜ್ ಕೆ.ಜೆ

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಯವರು

ಅ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರಗಳು ಎಷ್ಟು (ಕೇಂದ್ರಗಳ ವಿವರ ನೀಡುವುದು)?

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ/ನಿಟ್ಟಿಂಗ್ ತರಬೇತಿಯ 15 ಕೇಂದ್ರಗಳಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಾರ್ಡ್	ತರಬೇತಿ	ತರಬೇತಿ ಕೇಂದ್ರದ ವಿಳಾಸ
1.	86	ಹೊಲಿಗೆ	ಕಾಕ್ಸ್‌ಟೌನ್, ಜೀವನಹಳ್ಳಿ, ಬೆಂಗಳೂರು.

2.	86	ಹೊಲಿಗೆ	ರಾಘವೇಂದ್ರಸ್ವಾಮಿ ದೇವಸ್ಥಾನದ ಪಕ್ಕದ ರಸ್ತೆ, ಬಿ.ಬಿ.ಎಂ.ಪಿ. ಕಟ್ಟಡ, ಜೀವನಹಳ್ಳಿ ಸ್ಲಂ, ಬೆಂಗಳೂರು.
3.	86	ನಿಟ್ಟಿಂಗ್	ಕಾರ್ಕ್‌ಟೌನ್, ಜೀವನಹಳ್ಳಿ ಐ.ಟಿ.ಸಿ.ಕಾಲೋನಿ, ಬೆಂಗಳೂರು.
4.	87	ಹೊಲಿಗೆ	ಸುಬ್ಬಯ್ಯನ ಪಾಳ್ಯ, ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು.
5.	87	ಹೊಲಿಗೆ	ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪಕ್ಕ, ಬಾಳೆ ಅಂಗಡಿ ಮಂಡಿ ಮೇಲೆ, ಚಿಕ್ಕಬಾಣಸವಾಡಿ, ಬೆಂಗಳೂರು.
6.	87	ನಿಟ್ಟಿಂಗ್	ಸುಬ್ಬಯ್ಯನ ಪಾಳ್ಯ, ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು.
7.	88	ಹೊಲಿಗೆ	ಆಂಜನೇಯ ದೇವಸ್ಥಾನದ ಎದುರು, ಬಾಣಸವಾಡಿ, ಬೆಂಗಳೂರು.
8.	88	ಹೊಲಿಗೆ	ಪಾಪ್ಲಂ ಲೇ ಔಟ್, ಸೆಂಟ್. ಥಾಮಸ್ ಟೌನ್ ಪೋಸ್ಟ್, ಬಾಣಸವಾಡಿ, ಬೆಂಗಳೂರು.
9.	88	ನಿಟ್ಟಿಂಗ್	ಮಾರುತಿ ಯುವಕರ ಸಂಘ, ದೊಡ್ಡಬಾಣಸವಾಡಿ, ಬೆಂಗಳೂರು.
10.	89	ಹೊಲಿಗೆ	1035/3, ಕಾಚರಕನಹಳ್ಳಿ, ಬೆಂಗಳೂರು–84.
11.	89	ಹೊಲಿಗೆ	ನಂ. 1984, ಯಾದವ ಲೇಔಟ್, ಅರವಿಂದ್ ನಗರ, ಕಾಚರಕನಹಳ್ಳಿ, ಬೆಂಗಳೂರು–84.
12.	89	ನಿಟ್ಟಿಂಗ್	3ನೇ ಅಡ್ಡರಸ್ತೆ, ಲಕ್ಷ್ಮಯ್ಯರೆಡ್ಡಿ ರಸ್ತೆ, ಕಾಚರಕನಹಳ್ಳಿ, ಬೆಂಗಳೂರು–84.
13.	94	ಹೊಲಿಗೆ	7ನೇ ಅಡ್ಡರಸ್ತೆ, ವಿನೋಬಾ ನಗರ, ಕಾಡುಗೊಂಡನಹಳ್ಳಿ, ಬೆಂಗಳೂರು–45
14.	94	ಹೊಲಿಗೆ	ನಂ. 27, 7ನೇ ಅಡ್ಡರಸ್ತೆ, ವಿನೋಬಾ ನಗರ, ಕಾಡುಗೊಂಡನಹಳ್ಳಿ, ಬೆಂಗಳೂರು–45
15.	94	ನಿಟ್ಟಿಂಗ್	ವಿನೋಬಾನಗರ, ಕಾಡುಗೊಂಡನಹಳ್ಳಿ, ಬೆಂಗಳೂರು–45.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಪಾಲಿಕೆಯ ವತಿಯಿಂದ ಯಾವುದೇ ಕಂಪ್ಯೂಟರ್ ತರಬೇತಿ ಕೇಂದ್ರಗಳು ನಡೆಯುತ್ತಿರುವುದಿಲ್ಲ.